# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1003 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಡಾ:ಎಂ.ಜಿ.ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 14-03-2025 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಹಿಳೆಯರು ಸ್ವಯಂ ಉದ್ಯೋಗ ಮಾಡಲು ಸಹಾಯ ಮಾಡುವುದಕ್ಕೆ ಇಲಾಖೆಯಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ; ಯಾವ ರೀತಿಯ ಆರ್ಥಿಕ ಸಹಾಯ ಮಾಡಲಾಗುತ್ತಿದೆ; (ವಿವರ ಒದಗಿಸುವುದು) | ಮಹಿಳೆಯರ ಸ್ವಯಂ ಉದ್ಯೋಗಕ್ಕಾಗಿ ಸರ್ಕಾರವು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ಅನುಷ್ಠಾನಗೊಳಿಸಲಾಗುತ್ತಿರುವ ಕಾರ್ಯಕ್ರಮಗಳು ಮತ್ತು ವಿವರಗಳನ್ನು **ಅನುಬಂಧ-1**ರಲ್ಲಿ ಒದಗಿಸಲಾಗಿದೆ. |
| ಆ) | ಮಹಿಳಾ ಸಬಲೀಕರಣಕ್ಕಾಗಿ ಯಾವ ಯಾವ ಯೋಜನೆಗಳಿವೆ; ಈ ಯೋಜನೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಎಷ್ಟು ಜನರಿಗೆ ಸಹಾಯ ಮಾಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) | ಮಹಿಳಾ ಸಬಲೀಕರಣಕ್ಕಾಗಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ:<br><br>1. ಸ್ತ್ರೀಶಕ್ತಿ ಯೋಜನೆ :<br>2. ಗೃಹಲಕ್ಷ್ಮಿ ಯೋಜನೆ<br>3. ಉದ್ಯೋಗಿನಿ ಯೋಜನೆ<br>4. ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ<br>5. ಚೇತನ ಯೋಜನೆ<br>6. ಧನಶ್ರೀ ಯೋಜನೆ<br>7. ಮಾಜಿ ದೇವದಾಸಿ ಮಹಿಳೆಯರ ಪುನರ್ವಸತಿ ಯೋಜನೆ<br>8. ಮಾಜಿ ದೇವದಾದಿಯರಿಗೆ ವಸತಿ ನಿರ್ಮಾಣ ಯೋಜನೆ<br>9. ಬಡ್ಡಿ ಸಹಾಯಧನ ಯೋಜನೆ<br>10. ಮಹಿಳಾ ತರಬೇತಿ ಯೋಜನೆ<br>11. ವೃದ್ಧಿ ಯೋಜನೆ<br>12. ಕಿರುಸಾಲ<br>13. ಮಹಿಳೆಯರಿಗೆ ಬಡ್ಡಿ ಸಹಾಯಧನ ಯೋಜನೆ<br>14. ಆಸಿಡ್ ದಾಳಿ ಸಂತ್ರಸ್ಥರಿಗೆ ಸಾಲ ಸೌಲಭ್ಯ (ಗೆಳತಿ) ಯೋಜನೆ<br><br>ಕಳೆದ 2 ವರ್ಷಗಳಲ್ಲಿ ಸ್ತ್ರೀಶಕ್ತಿ ಯೋಜನೆಯಡಿ ಸೌಲಭ್ಯ ಪಡೆದ ಫಲಾನುಭವಿಗಳ ಜಿಲ್ಲಾವಾರು ಮಾಹಿತಿಯ ವಿವರಗಳನ್ನು **ಅನುಬಂಧ-2**ರಲ್ಲಿ ಒದಗಿಸಲಾಗಿದೆ<br><br>ಕಳೆದ 2 ವರ್ಷಗಳಲ್ಲಿ ಗೃಹಲಕ್ಷ್ಮಿ ಯೋಜನೆಯಡಿ ಸೌಲಭ್ಯ ಪಡೆದ ಫಲಾನುಭವಿಗಳ ಜಿಲ್ಲಾವಾರು ಮಾಹಿತಿಯ ವಿವರಗಳನ್ನು **ಅನುಬಂಧ-3**ರಲ್ಲಿ ಒದಗಿಸಲಾಗಿದೆ. |

| | | |
|---|---|---|
| | | ಕಳೆದ 2 ವರ್ಷಗಳಲ್ಲಿ ಮಹಿಳಾ ಸಬಲೀಕರಣ ಘಟಕದಡಿ ಮತ್ತು ಸಖಿ ನಿವಾಸ್ ಯೋಜನೆಗಳಡಿ ಸೌಲಭ್ಯ ಪಡೆದ ಫಲಾನುಭವಿಗಳ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-4** ರಲ್ಲಿ ಒದಗಿಸಲಾಗಿದೆ.<br><br>2023-24ನೇ ಸಾಲಿನಿಂದ ಉದ್ಯೋಗಸ್ಥ ಮಹಿಳೆಯರ ವಸತಿ ಯೋಜನೆಯಡಿ ಸೌಲಭ್ಯ ಪಡೆದ ಫಲಾನುಭವಿಗಳ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-5**ರಲ್ಲಿ ಒದಗಿಸಲಾಗಿದೆ.<br><br>ಕಳೆದ 2 ವರ್ಷಗಳಲ್ಲಿ ಉದ್ಯೋಗಿನಿ ಯೋಜನೆ, ಚೇತನ, ಧನಶ್ರೀ, ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ, ಕಿರುಸಾಲ, ಮಾಜಿ ದೇವದಾಸಿ ಮಹಿಳೆಯರ ಪುನರ್ವಸತಿ ಯೋಜನೆ, ವೃದ್ಧಿ ಮತ್ತು ಗೆಳತಿ ಯೋಜನೆಗಳಡಿ ಸೌಲಭ್ಯ ಪಡೆದ ಫಲಾನುಭವಿಗಳ ಜಿಲ್ಲಾವಾರು ಮಾಹಿತಿಯ ವಿವರಗಳನ್ನು **ಅನುಬಂಧ-6**ರಲ್ಲಿ ಒದಗಿಸಲಾಗಿದೆ. |
| ಇ) | ಶಿಶು ಅಭಿವೃದ್ಧಿಗಾಗಿ ಇರುವ ಯೋಜನೆ ಯಾವುದು; (ಸಂಪೂರ್ಣ ವಿವರ ನೀಡುವುದು) | ಶಿಶು ಅಭಿವೃದ್ಧಿಗಾಗಿ ಇರುವ ಯೋಜನೆಗಳ ಸಂಪೂರ್ಣ ವಿವರಗಳನ್ನು **ಅನುಬಂಧ-7** ರಲ್ಲಿ ಒದಗಿಸಲಾಗಿದೆ. |
| ಈ) | ವಿಧವೆಯರಿಗೆ ಮಾಸಾಶನ ನೀಡುವ ಯೋಜನೆ ಇದೆಯೇ; ನೀಡುತ್ತಿದ್ದರೆ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಜನರಿಗೆ ನೀಡಲಾಗಿದೆ; ವಿಧವೆಯರಿಗೆ ಸಹಾಯ ಮಾಡಲು ಬೇರೆ ವಿಶೇಷ ಯೋಜನೆ ಏನಾದರು ಇದೆಯೇ? | ಸಾಮಾಜಿಕ ಭದ್ರತೆ ಯೋಜನೆಯ ವಿಧವಾ ವೇತನ ಯೋಜನೆ ಮತ್ತು ರೈತ ಪತ್ನಿ ವಿಧವಾ ವೇತನ ಯೋಜನೆಯಡಿ ಅರ್ಹ ಫಲಾನುಭವಿಗಳಿಗೆ ಪ್ರತಿ ಮಾಹೆ ಪಿಂಚಣಿಯನ್ನು ಪಾವತಿಸಲಾಗುತ್ತಿದೆ.<br><br>ಕಳೆದ ಮೂರು ವರ್ಷಗಳಲ್ಲಿ ಪಿಂಚಣಿ ಪಾವತಿಸಿರುವ ವಿವರಗಳು ಕೆಳಕಂಡಂತಿದೆ: |

| ಕ್ರ. ಸಂ | ಯೋಜನೆ | 2022-23 | 2023-24 | 2024-25 |
|---|---|---|---|---|
| 1 | ವಿಧವಾ ವೇತನ | 1668861 | 1768341 | 1856245 |
| 2 | ರೈತ ಪತ್ನಿ ವಿಧವಾ ವೇತನ | 5814 | 6497 | 7102 |
| | **ಒಟ್ಟು:** | **1674675** | **1774838** | **1863347** |

ಸಂಖ್ಯೆ:ಮಮಇ 18 ಮಅನಿ 2025

**(ಲಕ್ಷ್ಮೀ ಆರ್. ಹೆಬ್ಬಾಳ್ಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರೀಕರ
ಸಬಲೀಕರಣ ಸಚಿವರು

## ಅನುಬಂಧ-01

### 2023-24 ಮತ್ತು 2024-25ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ಮಹಿಳೆಯರ ಸ್ವಯಂ ಉದ್ಯೋಗಕ್ಕಾಗಿ ಹಾಕಿಕೊಳ್ಳಲಾದ ಕಾರ್ಯಕ್ರಮಗಳು ಮತ್ತು ಆರ್ಥಿಕ ಸಹಾಯದ ವಿವರಗಳು

1. **ಉದ್ಯೋಗಿನಿ ಯೋಜನೆ:**
ಮಹಿಳೆಯರು ಆದಾಯ ಉತ್ಪನ್ನಕರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಸ್ವಯಂ ಉದ್ಯೋಗಿಗಳಾಗಲು ಬ್ಯಾಂಕ್ ಮೂಲಕ ಸಾಲ ಮತ್ತು ನಿಗಮದ ಮೂಲಕ ಸಹಾಯಧನವನ್ನು ನೀಡಲಾಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಸಾಲದ ಘಟಕ ವೆಚ್ಚ ಕನಿಷ್ಟ ರೂ.1.00 ಲಕ್ಷದಿಂದ ಗರಿಷ್ಟ ರೂ.3.00 ಲಕ್ಷಗಳು, ಸಹಾಯಧನದ ಮೊತ್ತ ಶೇಕಡ 50 ರಷ್ಟು, ಗರಿಷ್ಟ ರೂ.1,50,000/-ಗಳನ್ನು ನೀಡಲಾಗುತ್ತದೆ. ಕುಟುಂಬದ ವಾರ್ಷಿಕ ಆದಾಯದ ಗರಿಷ್ಟ ಮಿತಿ ರೂ.2.00 ಲಕ್ಷಗಳಿಗೆ ಮಿತಿಗೊಳಿಸಿದೆ. ಸಾಮಾನ್ಯ ವರ್ಗ ಮತ್ತು ವಿಶೇಷ ವರ್ಷದ ಮಹಿಳೆಯರಿಗೆ ಯೋಜನಾ ವೆಚ್ಚ ರೂ.1.00 ಲಕ್ಷದಿಂದ ರೂ.3.00 ಲಕ್ಷಗಳವರೆಗೆ, ಶೇ.30ರಷ್ಟು ಅಥವಾ ಗರಿಷ್ಠ ರೂ.90,000/-ಗಳ ಸಹಾಯಧನ ನೀಡಲಾಗುವುದು. ಸಾಮಾನ್ಯ ವರ್ಗದವರ ಕುಟುಂಬದ ವಾರ್ಷಿಕ ಆದಾಯವನ್ನು ಗರಿಷ್ಠ ರೂ.1.50 ಲಕ್ಷಗಳಿಗೆ ಮಿತಿಗೊಳಿಸಿದೆ. ಎಲ್ಲಾ ವರ್ಗದ ಮಹಿಳೆಯರಿಗೆ ವಯೋಮಿತಿ 18 ವರ್ಷ ಮೇಲ್ಪಟ್ಟು ಗರಿಷ್ಠ 55 ವರ್ಷದೊಳಗಿರಬೇಕು. ಬ್ಯಾಂಕುಗಳಿಂದ ಸಾಲ ಮಂಜೂರಾತಿ ನಂತರ ಇಡಿಪಿ ತರಬೇತಿಯೊಂದಿಗೆ ಸಹಾಯಧನವನ್ನು ಸಂಬಂಧಪಟ್ಟ ಬ್ಯಾಂಕ್ ಬ್ರಾಂಚುಗಳಿಗೆ DBT ಮುಖಾಂತರ ನಿಗಮದಿಂದ ಬಿಡುಗಡೆಗೊಳಿಸಲಾಗುವುದು. ಫಲಾನುಭವಿಗಳನ್ನು ಆಯಾ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರ ಅಧ್ಯಕ್ಷತೆಯ ಆಯ್ಕೆ ಸಮಿತಿಯಿಂದ ಆಯ್ಕೆ ಮಾಡಲಾಗುತ್ತದೆ.

2. **ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ:**
ಲಿಂಗತ್ವ ಅಲ್ಪಸಂಖ್ಯಾತರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸಲು ಆದಾಯೋತ್ಪನ್ನಕರ ಚಟುವಟಿಕೆ ಕೈಗೊಳ್ಳುವ ಉದ್ದೇಶಕ್ಕಾಗಿ ನಿಗಮದಿಂದ ನೇರವಾಗಿ ರೂ.30,000/-ಗಳ ಪ್ರೋತ್ಸಾಹಧನವನ್ನು DBT ಮುಖಾಂತರ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೀಡಲಾಗುವುದು. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯಿಂದ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ.

3. **ಚೇತನ ಯೋಜನೆ:**
ದಮನಿತ ಮಹಿಳೆಯರು (ಮಹಿಳಾ ಲೈಂಗಿಕ ಕಾರ್ಯಕರ್ತೆಯರು) ಆದಾಯೋತ್ಪನ್ನ ಚಟುವಟಿಕೆ ಕೈಗೊಳ್ಳಲು ಅನುವಾಗುವಂತೆ ನಿಗಮದಿಂದ ನೇರವಾಗಿ ರೂ.30,000/-ಗಳ ಪ್ರೋತ್ಸಾಹಧನವನ್ನು DBT ಮುಖಾಂತರ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೀಡಲಾಗುವುದು. ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯಿಂದ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ.

4. **ಧನಶ್ರೀ :-**
18 ರಿಂದ 60 ವಯೋಮಾನದ ಹೆಚ್.ಐ.ವಿ ಸೋಂಕಿತ ಹಾಗೂ ಬಾಧಿತ ಮಹಿಳೆಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ನಿಗಮದಿಂದ ನೇರವಾಗಿ ರೂ.30,000/-ಗಳ ಪ್ರೋತ್ಸಾಹಧನವನ್ನು DBT ಮುಖಾಂತರ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೀಡಲಾಗುವುದು. ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯಿಂದ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ.

5. **ಮಾಜಿ ದೇವದಾಸಿ ಮಹಿಳೆಯರ ಪುನರ್ವಸತಿ ಯೋಜನೆ:-**
ಆರ್ಥಿಕವಾಗಿ ಮಾಜಿ ದೇವದಾಸಿಯರನ್ನು ಸಬಲೀಕರಣಗೊಳಿಸಲು ಆದಾಯೋತ್ಪನ್ನಕರ ಚಟುವಟಿಕೆ ಕೈಗೊಳ್ಳುವ ಉದ್ದೇಶಕ್ಕಾಗಿ ನಿಗಮದಿಂದ 45 ವರ್ಷ ಮೇಲ್ಪಟ್ಟ ಮಾಜಿ ದೇವದಾಸಿ ಮಹಿಳೆಯರಿಗೆ ನೇರವಾಗಿ ಪ್ರೋತ್ಸಾಹಧನ ಮೊತ್ತ ರೂ.30,000/-ಗಳ ಆರ್ಥಿಕ ಸೌಲಭ್ಯವನ್ನು DBT ಮುಖಾಂತರ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೀಡಲಾಗುತ್ತಿದೆ ಹಾಗೂ ದೇವದಾಸಿ ಪದ್ಧತಿಯ ನಿರ್ಮೂಲನೆಗಾಗಿ ಅರಿವು ಮೂಡಿಸುವ ಕಾರ್ಯಕ್ರಮಗಳು, ಕಾನೂನು ಶಿಬಿರ ಹಾಗೂ ಮಾಜಿ ದೇವದಾಸಿ ಮಹಿಳೆಯರಿಗಾಗಿ ಆರೋಗ್ಯ ಶಿಬಿರಗಳನ್ನು ಕೈಗೊಳ್ಳಲಾಗುತ್ತಿದೆ. ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯಿಂದ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ಈ ಯೋಜನೆಯನ್ನು ರಾಜ್ಯದ 15 ಜಿಲ್ಲೆಗಳಲ್ಲಿ ಮಾತ್ರ ಅನುಷ್ಠಾನಗೊಳಿಸಲಾಗುತ್ತಿದೆ.

6. **ಮಾಜಿ ದೇವದಾಸಿಯರಿಗೆ ವಸತಿ ನಿರ್ಮಾಣ ಯೋಜನೆ:-**
ಕರ್ನಾಟಕ ರಾಜ್ಯದ 14 ಜಿಲ್ಲೆಗಳಲ್ಲಿ ನಿವೇಶನ ಹೊಂದಿರುವ ವಸತಿ ರಹಿತ ಮಾಜಿ ದೇವದಾಸಿ ಮಹಿಳೆಯರಿಗೆ ವಸತಿ ಯೋಜನೆಯನ್ನು ರಾಜೀವ್ ಗಾಂಧಿ ಗ್ರಾಮೀಣಾಭಿವೃದ್ಧಿ ವಸತಿ ನಿಗಮದ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ. 2018-19ನೇ ಸಾಲಿನಿಂದ ಗ್ರಾಮೀಣ ಪ್ರದೇಶದಲ್ಲಿ ರೂ.1.75 ಲಕ್ಷ ಹಾಗೂ ನಗರ ಪ್ರದೇಶದಲ್ಲಿ ರೂ.2.00 ಲಕ್ಷ ಘಟಕ ವೆಚ್ಚದಲ್ಲಿ ವಸತಿ ಸೌಲಭ್ಯ ಕಲ್ಪಿಸಲಾಗುತ್ತಿದೆ. 2023-24ನೇ ಸಾಲಿನಿಂದ ಈ ಯೋಜನೆಯಡಿ ಅನುದಾನ ಒದಗಿಸಿರುವುದಿಲ್ಲ.

7. **ಬಡ್ಡಿ ಸಹಾಯಧನ ಯೋಜನೆ (ಕರ್ನಾಟಕ ರಾಜ್ಯ ಆರ್ಥಿಕ ಹಣಕಾಸು ನಿಗಮ ಮೂಲಕ)**
2023-24ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ ಸಂಖ್ಯೆ 132 ರಲ್ಲಿ ಮಹಿಳಾ ಉದ್ಯಮಿಗಳು ಆತಿಥ್ಯ ಆರೈಕೆ ಮತ್ತು ಪ್ರವಾಸೋದ್ಯಮದಂತಹ ಸೇವಾ ವಲಯದಲ್ಲಿ ಹೆಚ್ಚಿನ ಅವಕಾಶ ಪಡೆಯುತ್ತಿದ್ದಾರೆ. ಆದ್ದರಿಂದ, ಸೇವಾ ವಲಯದಲ್ಲಿ ಮಹಿಳಾ ಉದ್ಯಮಿಗಳನ್ನು ಉತ್ತೇಜಿಸಲು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ರೂ.50.00 ಲಕ್ಷಗಳಿಂದ ರೂ.5.00 ಕೋಟಿಗಳ ವರೆಗೆ ಸಾಲ ಮತ್ತು KSFC ವಿಧಿಸುವ ಬಡ್ಡಿಯಲ್ಲಿ 10% ರಷ್ಟನ್ನು ಕರ್ನಾಟಕ ರಾಜ್ಯ ಮಹಿಳಾ ಅಭಿವೃಧ್ಧಿ ನಿಗಮದಿಂದ ಬಡ್ಡಿ ಸಹಾಯಧನವಾಗಿ 5 ವರ್ಷಗಳವರೆಗೆ ಫಲಾನುಭವಿಗಳಿಗೆ ನೀಡಲಾಗುವುದು.

8. **ಮಹಿಳಾ ತರಬೇತಿ ಯೋಜನೆ:-**
ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ಕೌಶಲ್ಯ ತರಬೇತಿ ನೀಡಿ, ಅವರಲ್ಲಿ ಉದ್ಯಮಶೀಲತೆಯನ್ನು ಬೆಳೆಸುವ ಗುರಿಯನ್ನು ಹೊಂದಲಾಗಿದೆ. ತರಬೇತಿಯನ್ನು ಕರ್ನಾಟಕ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಮಾರ್ಗಸೂಚಿಗಳಂತೆ ನಡೆಸಲಾಗುತ್ತಿದೆ.

9. **ವೃದ್ಧಿ ಯೋಜನೆ:-**
2022-23ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ:142 ರಲ್ಲಿ ಘೋಷಿಸಿರುವಂತೆ "ವ್ಯಾಪಾರ/ಉದ್ಯಮಗಳಲ್ಲಿ ಮಹಿಳೆಯರ ಉಪಸ್ಥಿತಿಯನ್ನು ಹೆಚ್ಚಿಸಲು KITS (ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ) ರವರು "ಎಲಿವೇಟ್" ಯೋಜನೆಯಡಿ ಗುರುತಿಸಲ್ಪಟ್ಟ ಮಹಿಳಾ ಉದ್ದಿಮೆದಾರರಿಗೆ/ಮಹಿಳಾ ನೇತೃತ್ವದ ಸ್ಟಾರ್ಟ್‌ಅಪ್ ಗಳಿಗೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ರೂ.5.00 ಲಕ್ಷಗಳಿಂದ ರೂ.10.00 ಲಕ್ಷಗಳ ತನಕ ನೇರ ಸಾಲವನ್ನು ಒದಗಿಸಿ "ವೃದ್ಧಿ" ಹೆಸರಿನಡಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.

10. **ಕಿರುಸಾಲ ಯೋಜನೆ:**
ಈ ಯೋಜನೆಯಡಿಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸ್ತ್ರೀಶಕ್ತಿ ಯೋಜನೆಯಡಿ ರಚನೆಗೊಂಡ ಸ್ತ್ರೀ ಶಕ್ತಿ ಸ್ವ-ಸಹಾಯ ಸಂಘಗಳು ಆರ್ಥಿಕವಾಗಿ ಸಬಲರಾಗಲು ಪ್ರತಿ ಸ್ತ್ರೀಶಕ್ತಿ ಸ್ವ-ಸಹಾಯ ಸಂಘಕ್ಕೆ ನಿಗಮದ ವತಿಯಿಂದ ರೂ.1.00 ಲಕ್ಷದಿಂದ ರೂ.2.00 ಗಳ ಬಡ್ಡಿರಹಿತ ಸಾಲ ಒದಗಿಸುವುದು. 2023-24ನೇ ಸಾಲಿನಿಂದ ಈ ಯೋಜನೆಯಡಿ ಅನುದಾನ ಒದಗಿಸಿರುವುದಿಲ್ಲ.

11. **ಮಹಿಳೆಯರಿಗೆ ಬಡ್ಡಿ ಸಹಾಯಧನ (ಇಂದಿರಾ ಯೋಜನೆ) ಯೋಜನೆ:-**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೇಲ್ವಿಚಾರಕರ ಕಾರ್ಯ ದಕ್ಷತೆಯನ್ನು ಹೆಚ್ಚಿಸಲು ಮೇಲ್ವಿಚಾರಕರಿಗೆ ದ್ವಿ-ಚಕ್ರ ವಾಹನ ಖರೀದಿಗಾಗಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ರೂ.50,000/-ಗಳ ಬಡ್ಡಿರಹಿತ ಸಾಲವನ್ನು ನೀಡಲಾಗುವುದು. 2024-25ನೇ ಸಾಲಿನಿಂದ ಅನುದಾನ ಒದಗಿಸಿರುವುದಿಲ್ಲ.

12. **ಆಸಿಡ್‌ದಾಳಿ ಸಂತ್ರಸ್ತ ಮಹಿಳೆಯರಿಗೆ ಸಾಲ ಸೌಲಭ್ಯ (ಗೆಳತಿ) ಯೋಜನೆ :-**
ರಾಜ್ಯದಲ್ಲಿ ಆಸಿಡ್ ದಾಳಿಗೆ ಒಳಗಾದ ಮಹಿಳೆಯರನ್ನು ಸಮಾಜದ ಮುಖ್ಯ ವಾಹಿನಿಗೆ ತರುವ ಉದ್ದೇಶದಿಂದ 2023-24ನೇ ಸಾಲಿನ ಆಯವ್ಯಯ ಘೋಷಣೆಯಂತೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಆಸಿಡ್ ದಾಳಿಗೆ ಒಳಗಾದ ಸಂತ್ರಸ್ತೆಯರು ಸ್ವ-ಉದ್ಯೋಗ ಕೈಗೊಳ್ಳಲು ಅವರ ಘಟಕ ವೆಚ್ಚಕ್ಕನುಸಾರವಾಗಿ ಗರಿಷ್ಠ ರೂ.5.00 ಲಕ್ಷಗಳ ವರೆಗೆ (ಶೇ.50 ರಷ್ಟು ಸಾಲ ಮತ್ತು ಶೇ.50 ರಷ್ಟು ಸಹಾಯಧನ) ಬಡ್ಡಿರಹಿತ ಆರ್ಥಿಕ ಸೌಲಭ್ಯವನ್ನು ನಿಗಮದಿಂದ ನೀಡಲಾಗುವುದು. ರಾಜೀವ್‌ಗಾಂಧಿ ವಸತಿ ನಿಗಮದ ಮೂಲಕ ರೂ.5.00 ಲಕ್ಷಗಳ ವೆಚ್ಚದಲ್ಲಿ ಆಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ವಸತಿ ನಿರ್ಮಾಣ ಸೌಲಭ್ಯ ಒದಗಿಸಲಾಗುವುದು. 2024-25ನೇ ಸಾಲಿನಿಂದ ಅನುದಾನ ನಿಗದಿಯಾಗಿರುವುದಿಲ್ಲ.

## ಅನುಬಂಧ-2

### ಮಾನ್ಯ ವಿಧಾನಪರಿಷತ್ ಸದಸ್ಯರಾದ ಡಾ: ಎಂ. ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 801 (1003)

| ಕ್ರ. ಸಂ | ಜಿಲ್ಲೆಗಳ ಹೆಸರು | 2022-23 | | 2023-24 | |
|---|---|---|---|---|---|
| | | SCSP | TSP | SCSP | TSP |
| | | ಸ್ತ್ರೀಶಕ್ತಿ ಗುಂಪು | ಸ್ತ್ರೀಶಕ್ತಿ ಗುಂಪು | ಸ್ತ್ರೀಶಕ್ತಿ ಗುಂಪು | ಸ್ತ್ರೀಶಕ್ತಿ ಗುಂಪು |
| 1 | ಬೆಂಗಳೂರು(ನ) | 12 | 7 | 0 | 7 |
| 2 | ಬೆಂಗಳೂರು(ಗ್ರಾ) | 0 | 13 | 8 | 13 |
| 3 | ಚಿಕ್ಕಬಳ್ಳಾಪುರ | 12 | 29 | 15 | 48 |
| 4 | ಚಿತ್ರದುರ್ಗ | 12 | 40 | 15 | 13 |
| 5 | ದಾವಣಗೆರೆ | 12 | 42 | 8 | 48 |
| 6 | ಕೋಲಾರ | 12 | 12 | 12 | 13 |
| 7 | ರಾಮನಗರ | 0 | 3 | 0 | 7 |
| 8 | ಶಿವಮೊಗ್ಗ | 12 | 19 | 8 | 13 |
| 9 | ತುಮಕೂರು | 12 | 17 | 12 | 48 |
| 10 | ಬಾಗಲಕೋಟೆ | 0 | 48 | 0 | 49 |
| 11 | ಬೆಳಗಾವಿ | 13 | 13 | 8 | 7 |
| 12 | ವಿಜಯಪುರ | 13 | 10 | 15 | 7 |
| 13 | ಧಾರವಾಡ | 0 | 47 | 15 | 13 |
| 14 | ಗದಗ | 12 | 18 | 8 | 48 |
| 15 | ಹಾವೇರಿ | 12 | 32 | 15 | 48 |
| 16 | ಉತ್ತರ ಕನ್ನಡ | 0 | 10 | 0 | 13 |
| 17 | ಬಳ್ಳಾರಿ | 13 | 87 | 23 | 13 |
| 18 | ಬೀದರ್ | 13 | 30 | 15 | 49 |
| 19 | ಕಲಬುರ್ಗಿ | 12 | 3 | 8 | 7 |
| 20 | ಕೊಪ್ಪಳ | 12 | 18 | 15 | 48 |
| 21 | ರಾಯಚೂರು | 0 | 87 | 0 | 48 |
| 22 | ಯಾದಗಿರಿ | 12 | 24 | 8 | 48 |
| 23 | ಹಾಸನ | 12 | 14 | 15 | 13 |
| 24 | ಮಂಡ್ಯ | 12 | 7 | 15 | 6 |
| 25 | ಚಾಮರಾಜನಗರ | 12 | 22 | 8 | 13 |
| 26 | ಚಿಕ್ಕಮಗಳೂರು | 12 | 7 | 13 | 7 |
| 27 | ದಕ್ಷಿಣ ಕನ್ನಡ | 12 | 3 | 0 | 7 |
| 28 | ಕೊಡಗು | 12 | 3 | 8 | 7 |
| 29 | ಮೈಸೂರು | 12 | 20 | 13 | 12 |
| 30 | ಉಡುಪಿ | 0 | 9 | 0 | 7 |
| | **ಒಟ್ಟು** | **280** | **694** | **280** | **680** |

| ಅನುಬಂಧ- 3 | | | |
|---|---|---|---|
| ಮಾನ್ಯ ವಿಧಾನಪರಿಷತ್ ಸದಸ್ಯರಾದ<br>ಡಾ: ಎಂ. ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) ಇವರ<br>ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 801 (1003) | | | |
| ಗೃಹಲಕ್ಷ್ಮಿ ಯೋಜನೆಯಡಿ 2023-24 ಮತ್ತು 2024-25ನೇ ಸಾಲಿನಲ್ಲಿ ಯಶಸ್ವಿಯಾಗಿ ಧನಸಹಾಯ ಮಾಡಲಾದ ಫಲಾನುಭವಿಗಳ ಜಿಲ್ಲಾವಾರು ಮಾಹಿತಿ | | | |
| ಕ್ರ. ಸಂ. | ಜಿಲ್ಲೆಯ ಹೆಸರು | 2023-24 (ಮಾರ್ಚ್-2024ರ ಅಂತ್ಯಕ್ಕೆ) | 2024-25 (ಅಕ್ಟೋಬರ್-2024ರ ಅಂತ್ಯಕ್ಕೆ) |
| 1 | ಬಾಗಲಕೋಟೆ | 397302 | 404904 |
| 2 | ಬಳ್ಳಾರಿ | 278239 | 283148 |
| 3 | ಬೆಳಗಾವಿ | 1287940 | 1120892 |
| 4 | ಬೆಂಗಳೂರು ನಗರ | 846628 | 879609 |
| 5 | ಬೆಂಗಳೂರು (ಗ್ರಾ) | 202681 | 207596 |
| 6 | ಬೀದರ್ | 318450 | 335429 |
| 7 | ಚಾಮರಾಜನಗರ | 263642 | 270219 |
| 8 | ಚಿಕ್ಕಬಳ್ಳಾಪುರ | 276866 | 282077 |
| 9 | ಚಿಕ್ಕಮಗಳೂರು | 256171 | 262966 |
| 10 | ಚಿತ್ರದುರ್ಗ | 380978 | 385335 |
| 11 | ದಕ್ಷಿಣ ಕನ್ನಡ | 347356 | 355263 |
| 12 | ದಾವಣಗೆರೆ | 354624 | 360849 |
| 13 | ಧಾರವಾಡ | 363205 | 371947 |
| 14 | ಗದಗ | 237782 | 243450 |
| 15 | ಹಾಸನ | 429168 | 433612 |
| 16 | ಹಾವೇರಿ | 372809 | 380710 |
| 17 | ಕಲ್ಬುರ್ಗಿ | 536789 | 551452 |
| 18 | ಕೊಡಗು | 113910 | 116187 |
| 19 | ಕೋಲಾರ | 304503 | 312531 |
| 20 | ಕೊಪ್ಪಳ | 308163 | 313734 |
| 21 | ಮಂಡ್ಯ | 445952 | 448525 |
| 22 | ಮೈಸೂರು | 665362 | 673060 |
| 23 | ರಾಯಚೂರು | 413100 | 427511 |
| 24 | ರಾಮನಗರ | 267327 | 270245 |
| 25 | ಶಿವಮೊಗ್ಗ | 380395 | 386151 |
| 26 | ತುಮಕೂರು | 612806 | 620725 |
| 27 | ಉಡುಪಿ | 220296 | 224348 |
| 28 | ಉತ್ತರಕನ್ನಡ | 311879 | 321627 |
| 29 | ವಿಜಯನಗರ | 278591 | 287940 |
| 30 | ವಿಜಯಪುರ | 475802 | 491648 |
| 31 | ಯಾದಗಿರಿ | 242522 | 249104 |
| | ಒಟ್ಟು | 12003226 | 12272794 |

| ಅನುಬಂಧ- 4 | | | | |
|---|---|---|---|---|
| ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1003 ಕ್ಕೆ ಮಾಹಿತಿ | | | | |
| **2022-23 ಮತ್ತು 2024-25 ನೇ ಸಾಲಿನ ಮಹಿಳಾ ಕಲ್ಯಾಣ ಯೋಜನೆಗಳ ಫಲಾನುಭವಿಗಳ ವಿವರ** | | | | |
| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಮಹಿಳಾ ಸಬಲೀಕರಣ ಘಟಕ (ಸೌಲಭ್ಯ ಪಡೆದ ಮಹಿಳೆಯರು) | ಸಖಿ ನಿವಾಸ್ (ವಾಸ್ತವ್ಯ ಪಡೆದ ಫಲಾನುಭವಿಗಳ ಸಂಖ್ಯೆ) | ಸಖಿ ನಿವಾಸ್ (ವಾಸ್ತವ್ಯ ಪಡೆದ ಫಲಾನುಭವಿಗಳ ಸಂಖ್ಯೆ) |
| | | **2023-24ನೇ ಸಾಲಿನಿಂದ ಪ್ರಾರಂಭವಾಗಿರುತ್ತದೆ** | **2022-23** | **2023-24** |
| 1 | ಬೆಂಗಳೂರು ನಗರ | 800 | 500 | 714 |
| 2 | ಚಾಮರಾಜನಗರ | 360 | 0 | 0 |
| 3 | ಬೆಳಗಾಂ | 700 | 378 | 310 |
| 4 | ಗದಗ | 52 | 12 | 50 |
| 5 | ಉಡುಪಿ | 45 | 68 | 102 |
| 6 | ಬೆಂಗಳೂರು(ಗ್ರಾ) | 730 | 0 | 0 |
| 7 | ರಾಮನಗರ | 25 | 0 | 0 |
| 8 | ಚಿಕ್ಕಬಳ್ಳಾಪುರ | 48 | 0 | 0 |
| 9 | ಕೋಲಾರ | 120 | 0 | 0 |
| 10 | ತುಮಕೂರು | 102 | 125 | 104 |
| 11 | ಮೈಸೂರು | 684 | 257 | 400 |
| 12 | ಮಂಡ್ಯ | 945 | 208 | 410 |
| 13 | ಕೊಡಗು | 114 | 41 | 45 |
| 14 | ಹಾಸನ | 450 | 45 | 50 |
| 15 | ಶಿವಮೊಗ್ಗ | 40 | 196 | 196 |
| 16 | ಕೊಪ್ಪಳ | 40 | 0 | 0 |
| 17 | ಚಿತ್ರದುರ್ಗ | 25 | 44 | 132 |
| 18 | ದಾವಣಗೆರೆ | 28 | 16 | 45 |
| 19 | ಚಿಕ್ಕಮಗಳೂರು | 56 | 86 | 152 |
| 20 | ದಕ್ಷಿಣಕನ್ನಡ | 86 | 597 | 718 |
| 21 | ಧಾರವಾಡ | 23 | 163 | 338 |
| 22 | ಹಾವೇರಿ | 850 | 0 | 0 |
| 23 | ವಿಜಯಪುರ | 496 | 0 | 0 |
| 24 | ಬಾಗಲಕೋಟೆ | 180 | 122 | 50 |
| 25 | ಉತ್ತರಕನ್ನಡ | 50 | 109 | 80 |
| 26 | ರಾಯಚೂರು | 152 | 146 | 36 |
| 27 | ಬೀದರ್ | 1146 | 232 | 257 |
| 28 | ಕಲಬುರ್ಗಿ | 25 | 200 | 338 |
| 29 | ಬಳ್ಳಾರಿ | 85 | 245 | 260 |
| 30 | ವಿಜಯನಗರ | 98 | 0 | 0 |
| 31 | ಯಾದಗಿರಿ | 30 | 0 | 0 |
| ಒಟ್ಟು | | **8585** | **3790** | **4787** |

| ಅನುಬಂಧ- 5 | | |
|---|---|---|
| **ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1003 ಕ್ಕೆ ಮಾಹಿತಿ** | | |
| **2023-24 ನೇ ಸಾಲಿನ ಮಹಿಳಾ ಕಲ್ಯಾಣ ಯೋಜನೆಗಳ ಫಲಾನುಭವಿಗಳ ವಿವರ** | | |
| **ಕ್ರ.ಸಂ** | **ಜಿಲ್ಲೆಯ ಹೆಸರು** | **ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ (ವಾಸ್ತವ್ಯ ಪಡೆದ ಫಲಾನುಭವಿಗಳ ಸಂಖ್ಯೆ) 2023-24ನೇ ಸಾಲಿನಿಂದ ಪ್ರಾರಂಭವಾಗಿರುತ್ತದೆ** |
| 1 | ಬೆಂಗಳೂರು ನಗರ | 244 |
| 2 | ಬೆಳಗಾಂ | 80 |
| 3 | ಮೈಸೂರು | 42 |
| 4 | ದಕ್ಷಿಣಕನ್ನಡ | 75 |
| 5 | ಧಾರವಾಡ | 82 |
| 6 | ಕಲಬುರ್ಗಿ | 14 |
| **ಒಟ್ಟು** | | **537** |

# ಅನುಬಂಧ-6

## ಮಹಿಳಾ ಸಬಲೀಕರಣಕ್ಕಾಗಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಲ್ಲಿ ಕಳೆದ ಎರಡು ವರ್ಷಗಳಲ್ಲಿ ಅನುಷ್ಠಾನಗೊಳಿಸಿರುವ ಯೋಜನೆಗಳು ಮತ್ತು ಸಹಾಯ ಮಾಡಲಾದ ಫಲಾನುಭವಿಗಳ ಜಿಲ್ಲಾವಾರು ಸಂಖ್ಯಾ ವಿವರ

| ಕ್ರ.ಸಂ | ಜಿಲ್ಲೆ | ಯೋಜನಾ ವಿವರಗಳು | | | | | | | | |
|---|---|---|---|---|---|---|---|---|---|---|
| | | ಉದ್ಯೋಗಿನಿ | ಚೇತನ | ಧನಶ್ರೀ | ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ | ಕಿರುಸಾಲ | ಮಾಜಿ ದೇವದಾಸಿ ಮಹಿಳೆಯರ ಪುನರ್ವಸತಿ ಯೋಜನೆ | ವೃದ್ಧಿ | ಗೆಳತಿ | ಒಟ್ಟು |
| 1 | ಬೆಂಗಳೂರು(ನ) | 48 | 193 | 102 | 272 | 2 | | 7 | 5 | **629** |
| 2 | ಬೆಂಗಳೂರು(ಗ್ರಾ) | 14 | 7 | 4 | 75 | 3 | | | | **103** |
| 3 | ಬೆಳಗಾವಿ | 66 | 150 | 176 | 91 | 11 | 16 | | 1 | **511** |
| 4 | ಬಾಗಲಕೋಟೆ | 41 | 48 | 98 | 57 | 3 | 112 | | | **359** |
| 5 | ಬಳ್ಳಾರಿ | 15 | 56 | 61 | 54 | 2 | 26 | | | **214** |
| 6 | ಬೀದರ್ | 24 | 21 | 32 | 16 | 0 | | | | **93** |
| 7 | ಚಾಮರಾಜನಗರ | 20 | 7 | 19 | 40 | 2 | | | | **88** |
| 8 | ಚಿತ್ರದುರ್ಗ | 21 | 38 | 24 | 8 | 2 | 22 | | | **115** |
| 9 | ಚಿಕ್ಕಮಗಳೂರು | 26 | 21 | 17 | 27 | 3 | | | 3 | **97** |
| 10 | ಚಿಕ್ಕಬಳ್ಳಾಪುರ | 15 | 23 | 18 | 44 | 4 | | | 1 | **105** |
| 11 | ದಾವಣಗೆರೆ | 26 | 42 | 42 | 55 | 3 | 22 | | 1 | **191** |
| 12 | ದಕ್ಷಿಣ ಕನ್ನಡ | 30 | 18 | 26 | 17 | 4 | | 2 | 1 | **98** |
| 13 | ಧಾರವಾಡ | 63 | 33 | 39 | 40 | 0 | 26 | 3 | | **204** |
| 14 | ಗದಗ | 21 | 34 | 30 | 40 | 4 | 48 | | | **177** |
| 15 | ಹಾಸನ | 23 | 31 | 32 | 74 | 4 | | | 1 | **165** |
| 16 | ಹಾವೇರಿ | 42 | 19 | 29 | 15 | 1 | 30 | | | **136** |
| 17 | ಕಲಬುರ್ಗಿ | 23 | 47 | 43 | 58 | 4 | 10 | | | **185** |
| 18 | ಕೋಲಾರ | 24 | 34 | 26 | 43 | 2 | | | 2 | **131** |
| 19 | ಕೊಪ್ಪಳ | 35 | 24 | 47 | 39 | 2 | 58 | | 1 | **206** |
| 20 | ಕೊಡಗು | 23 | 4 | 8 | 25 | 1 | | | | **61** |
| 21 | ಮಂಡ್ಯ | 29 | 17 | 28 | 52 | 4 | | | | **130** |
| 22 | ಮೈಸೂರು | 31 | 35 | 66 | 78 | 3 | | | 1 | **214** |
| 23 | ರಾಯಚೂರು | 12 | 32 | 49 | 70 | 0 | 4 | | 1 | **168** |
| 24 | ರಾಮನಗರ | 46 | 5 | 12 | 40 | 4 | | | | **107** |
| 25 | ಶಿವಮೊಗ್ಗ | 21 | 13 | 22 | 78 | 4 | 0 | | 5 | **143** |
| 26 | ತುಮಕೂರು | 56 | 30 | 50 | 85 | 8 | | | 2 | **231** |
| 27 | ಉತ್ತರಕನ್ನಡ | 25 | 29 | 13 | 15 | 0 | | | | **82** |
| 28 | ಉಡುಪಿ | 25 | 6 | 28 | 22 | 4 | | | | **85** |
| 29 | ವಿಜಯಪುರ | 50 | 49 | 69 | 81 | 1 | 42 | 1 | 2 | **295** |
| 30 | ವಿಜಯನಗರ | 12 | 89 | 34 | 22 | 0 | 167 | | | **324** |
| 31 | ಯಾದಗಿರಿ | 29 | 18 | 27 | 31 | 2 | 21 | | | **128** |
| **ಒಟ್ಟು** | | **936** | **1173** | **1271** | **1664** | **87** | **604** | **13** | **27** | **5775** |

# ಅನುಬಂಧ- 7

## ಮಾನ್ಯ ವಿಧಾನಪರಿಷತ್ ಸದಸ್ಯರಾದ ಡಾ: ಎಂ. ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 801 (1003)

### ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಈ ಕೆಳಕಂಡ ಯೋಜನೆಗಳನ್ನು ಶಿಶು ಅಭಿವೃದ್ಧಿಗಾಗಿ ಒದಗಿಸಲಾಗುತ್ತಿದೆ.

1. **ಶಾಲಾ ಪೂರ್ವ ಶಿಕ್ಷಣ:-** 3 ರಿಂದ 6 ವರ್ಷದ ಅಂಗನವಾಡಿ ಕೇಂದ್ರಕ್ಕೆ ದಾಖಲಾಗುವ ಎಲ್ಲಾ ಮಕ್ಕಳಿಗೆ ರೂಢಿಗತವಲ್ಲದ ಶಾಲಾ ಪೂರ್ವ ಶಿಕ್ಷಣವನ್ನು ನೀಡಲಾಗುತ್ತಿದೆ. ಪ್ರಸ್ತುತ ರಾಜ್ಯಾದ್ಯಂತ 69919 ಅಂಗನವಾಡಿ ಕೇಂದ್ರಗಳ ಮುಖಾಂತರ 3 ರಿಂದ 6 ವರ್ಷದ 1544003 ಮಕ್ಕಳು ಈ ಸೌಲಭ್ಯವನ್ನು ಪಡೆಯುತ್ತಿದ್ದಾರೆ.
2. **ಪೂರಕ ಪೌಷ್ಠಿಕ ಆಹಾರ:-** 6 ತಿಂಗಳಿಂದ 6 ವರ್ಷದ ಮಕ್ಕಳು ಪ್ರತಿ ದಿನ ಮನೆಯಲ್ಲಿ ಸೇವಿಸುವ ಆಹಾರಕ್ಕೆ ಪೂರಕವಾಗಿ ಪರಿಷ್ಕೃತ ಮಾರ್ಗಸೂಚಿಯಂತೆ, ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮದಡಿ ಅಂಗನವಾಡಿಗಳ ಮೂಲಕ ರಾಜ್ಯದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿರುವ 6 ತಿಂಗಳಿಂದ 6 ವರ್ಷದ ಮಕ್ಕಳಿಗೆ ಪ್ರತಿ ದಿನ ರೂ. 8/- ರ ಘಟಕ ವೆಚ್ಚದಂತೆ, ತೀವ್ರ ಅಪೌಷ್ಠಿಕತೆಯುಳ್ಳ ಮಕ್ಕಳಿಗೆ ರೂ.12/-ರ ಘಟಕ ವೆಚ್ಚದಂತೆ, ಪೂರಕ ಪೌಷ್ಠಿಕ ಆಹಾರವನ್ನು ಈ ಕೆಳಕಂಡಂತೆ ಒದಗಿಸಲಾಗುತ್ತಿದೆ.

   - 6 ತಿಂಗಳಿನಿಂದ – 3 ವರ್ಷ : ಪುಷ್ಠಿ(ನ್ಯೂಟ್ರಿಮಿಕ್ಸ್ ಪುಡಿ), ಬೆಲ್ಲ
   - 3-6 ವರ್ಷ: ಮಿಲೆಟ್ ಲಡ್ಡು, ರವಾ ಉಪ್ಪಿಟ್ಟು, ಅನ್ನ ಸಾಂಬರ್, ರವಾ ಪಾಯಸ.
   - 3-6 ವರ್ಷದ ತೀವ್ರ ಅಪೌಷ್ಠಿಕ ಮಕ್ಕಳಿಗೆ 220 gm ಪುಷ್ಠಿ ಪುಡಿ (ನ್ಯೂಟ್ರಿಮಿಕ್ಸ್ ಪುಡಿ) ಮನೆಗೆ ನೀಡಲಾಗುತ್ತಿದೆ.
   - ಕ್ಷೀರ ಭಾಗ್ಯ ಯೋಜನೆಯಡಿ 6 ತಿಂ – 6 ವರ್ಷದ ಮಕ್ಕಳಿಗೆ ವಾರದಲ್ಲಿ 5 ದಿನ 150 ಮಿ.ಲೀ ಹಾಲು ನೀಡಲಾಗುತ್ತಿದೆ (15ಗ್ರಾಂ ಹಾಲಿನಪುಡಿ, 5 ಗ್ರಾಂ ಸಕ್ಕರೆ)
   - ಸೃಷ್ಠಿ ಯೋಜನೆಯಡಿಯಲ್ಲಿ 06 ತಿಂಗಳಿಂದ 3 ವರ್ಷದ ತೀವ್ರ /ಸಾಧಾರಣಾ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 3 ದಿನ ಮೊಟ್ಟೆ, 3-6 ವರ್ಷದ ತೀವ್ರ /ಸಾಧಾರಣಾ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 5 ದಿನ ಮೊಟ್ಟೆ ನೀಡಲಾಗುತ್ತಿದೆ. ಮೊಟ್ಟೆ ತಿನ್ನದ ಮಕ್ಕಳಿಗೆ ವಾರದ 6 ದಿನ ಹಾಲು ನೀಡಲಾಗುತ್ತಿದೆ.
   - 3-6 ವರ್ಷದ ಎಲ್ಲಾ ಮಕ್ಕಳಿಗೆ ವಾರದಲ್ಲಿ 2 ದಿನ ಮೊಟ್ಟೆ ನೀಡಲಾಗುತ್ತಿದೆ.

   ಈ ಯೋಜನೆಯಿಂದ 6 ತಿಂಗಳಿಂದ 6 ವರ್ಷದ ಮಕ್ಕಳಿಗೆ ಬೇಕಾಗುವ 500 ಕ್ಯಾಲೊರಿಗಳನ್ನು ಮತ್ತು 12-15 ಗ್ರಾಂ ಪ್ರೋಟಿನ್, ತೀವ್ರ ಅಪೌಷ್ಠಿಕತೆಯುಳ್ಳ ಮಕ್ಕಳಿಗೆ 800 ಕ್ಯಾಲೊರಿಗಳನ್ನು ಮತ್ತು 20-25 ಗ್ರಾಂ ಪ್ರೋಟಿನ್ ಅಗತ್ಯತೆಯನ್ನು ಪೂರೈಸಲಾಗುತ್ತಿದೆ.

3. **ಚುಚ್ಚುಮದ್ದು ಕಾರ್ಯಕ್ರಮ:-** ಆರೋಗ್ಯ ಇಲಾಖೆಯ ಸಹಕಾರದೊಂದಿಗೆ ಅಂಗನವಾಡಿ ಕೇಂದ್ರದ ಮಕ್ಕಳಿಗೆ ಎಲ್ಲಾ ಚುಚ್ಚುಮದ್ದುಗಳನ್ನು ಸಕಾಲದಲ್ಲಿ ಪಡೆಯಲು ಪೋಷಕರಿಗೆ ತಿಳುವಳಿಕೆ ನೀಡಿ ಚುಚ್ಚುಮದ್ದು ಕಾರ್ಯಕ್ರಮಕ್ಕೆ ಹಾಜರಾಗುವಂತೆ ಅಂಗನವಾಡಿ ಕಾರ್ಯಕರ್ತೆಯರು ಕ್ರಮಕೈಗೊಳ್ಳುವರು. ಇದರೊಂದಿಗೆ ಮಕ್ಕಳನ್ನು ಆರೋಗ್ಯ ತಪಾಸಣೆಗೆ ಒಳಪಡಿಸಿ ಮಾಹಿತಿ ಸೇವೆಗೆ ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಲು ಕ್ರಮಕೈಗೊಳ್ಳುತ್ತಾರೆ.

4. **ಪೋಷಣ್ ಅಭಿಯಾನ್ ಯೋಜನೆ:-** ಅಂಗನವಾಡಿ ಕೇಂದ್ರಕ್ಕೆ ದಾಖಲಾಗುವ ಪ್ರತಿಯೊಂದು ಮಗುವಿನ ಬೆಳವಣಿಗೆಯ ಹಂತದ (ತೂಕ, ಎತ್ತರ) ಮಾಹಿತಿಯನ್ನು ಪೋಷಣ್ ಟ್ರ್ಯಾಕರ್ ನಲ್ಲಿ ಅಳವಡಿಸಲು ಅವಕಾಶ ಕಲ್ಪಿಸಿದ್ದು, ಬೆಳವಣಿಗೆಯಲ್ಲಿ ಕುಂಠಿತ ಬೆಳವಣಿಗೆಯಲ್ಲಿರುವ ಮಕ್ಕಳನ್ನು ಗುರುತಿಸಿ ಸಕಾಲದಲ್ಲಿ ಮಗುವಿನ ತಾಯಂದಿರಿಗೆ ತಿಳುವಳಿಕೆ ನೀಡಿ ಹೆಚ್ಚಿನ ಚಿಕಿತ್ಸೆಯ ಅವಶ್ಯಕತೆ ಇದ್ದಲ್ಲಿ NRC ಕೇಂದ್ರಕ್ಕೆ ಕಳುಹಿಸಲಾಗುತ್ತದೆ. ಸಮುದಾಯ ಆಧಾರಿತ ಚಟುವಟಿಕೆಯನ್ನು ಮೊದಲನೇ ಹಾಗೂ ಮೂರನೇ ಶುಕ್ರವಾರ ಕಾರ್ಯಕ್ರಮವನ್ನು ಅಂಗನವಾಡಿ ಕೇಂದ್ರಗಳಲ್ಲಿ ಆಯೋಜಿಸಲಾಗುತ್ತದೆ. ಸ್ತನ್ಯ ಪಾನ ಹಾಗೂ ಪೌಷ್ಟಿಕ ಆಹಾರ ಸಪ್ತಾಹ, ಪೋಷಣ್ ಮಾಹ ಆಚರಣೆಯ ಮೂಲಕ ಸಮುದಾಯದಲ್ಲಿ ಪೌಷ್ಟಿಕತೆಯನ್ನು ಕುರಿತು ಅರಿವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ. 0-6 ವರ್ಷದ ಮಕ್ಕಳಲ್ಲಿನ ಕುಂಠಿತ ಬೆಳವಣಿಗೆಯನ್ನು ಕಡಿಮೆಗೊಳಿಸಲಾಗುತ್ತಿದೆ.

5. **ಮಾತೃಪೂರ್ಣ ಯೋಜನೆ:-** ಅಂಗನವಾಡಿ ಕೇಂದ್ರಕ್ಕೆ ದಾಖಲಾದ ಎಲ್ಲಾ ಗರ್ಭಿಣಿ ಮತ್ತು ಬಾಣಂತಿಯರಿಗೆ ಪೌಷ್ಟಿಕಾಂಶಯುಕ್ತ ಬಿಸಿಯೂಟವನ್ನು ಒದಗಿಸಿ ಹೆರಿಗೆ ಸಮಯದಲ್ಲಿ ಗರ್ಭಿಣಿ ಹಾಗೂ ಶಿಶು ಮರಣ ಸಂಖ್ಯಾ ಪ್ರಮಾಣವನ್ನು ಮತ್ತು ಕಡಿಮೆ ತೂಕದ ಮಕ್ಕಳ ಜನನ ನಿಯಂತ್ರಿಸುವುದು, ರಕ್ತ ಹೀನತೆ ಕಡಿಮೆಗೊಳಿಸಿ ಕಬ್ಬಿಣಾಂಶ ಹಾಗೂ ಕ್ಯಾಲ್ಸಿಯಂ ಮಾತ್ರೆ ಸೇವನೆಗೆ ಬೆಂಬಲ ಹಾಗೂ ಪ್ರತಿ ತಿಂಗಳು ಗರ್ಭಿಣಿಯರ ತೂಕವನ್ನು ಪರಿಶೀಲಿಸಿ ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.

6. **ಅಂಗನವಾಡಿ ಕಂ ಕ್ರಷ್ ಕೇಂದ್ರಗಳು:-** ಮಹಿಳೆಯರ ಸಬಲೀಕರಣ ಹಾಗೂ ಸ್ವಾವಲಂಬಿಯಾಗಲು ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದ್ದು, ಈ ಕೇಂದ್ರಗಳಲ್ಲಿ ದುಡಿಯುವ ಮಹಿಳೆಯರ 6 ವರ್ಷದೊಳಗಿನ ಮಕ್ಕಳನ್ನು ತಾಯಂದಿರ ಕೆಲಸದ ಅವಧಿ ಮುಗಿಯುವವರೆಗೂ ಸುರಕ್ಷಿತವಾಗಿ ನೋಡಿಕೊಳ್ಳುವುದರ ಮೂಲಕ ಮಕ್ಕಳ ಪ್ರಾರಂಭಿಕ ಬಾಲ್ಯದ ಮೈಲಿಗಲ್ಲುಗಳನ್ನು ಸುಲಭವಾಗಿ ಸಾಧಿಸಲು ಈ ಯೋಜನೆಯು ಸಹಕಾರಿಯಾಗಿರುತ್ತದೆ.

7. **LKG/ UKG:-** ಅಂಗನವಾಡಿ ಕೇಂದ್ರಗಳಲ್ಲೇ LKG & UKG / ಪೂರ್ವ ಪ್ರಾಥಮಿಕ ಶಾಲೆಯನ್ನು ರಾಜ್ಯದ 250 ಅಂಗನವಾಡಿ ಕೇಂದ್ರಗಳಲ್ಲಿ ಪ್ರಾಯೋಗಿಕವಾಗಿ ಪ್ರಾರಂಭಿಸಲಾಗಿದ್ದು, ಈ ಮೂಲಕ ಮಕ್ಕಳಿಗೆ ಉತ್ತಮ ಗುಣಮಟ್ಟದ ಬಾಲ್ಯ ಪೂರ್ವ ಆರೈಕೆ ಮತ್ತು ಶಿಕ್ಷಣವನ್ನು ಸ್ಥಳೀಯವಾಗಿ ಒದಗಿಸಲಾಗುತ್ತಿದೆ.

8. **ಸಕ್ಷಮ್ ಅಂಗನವಾಡಿ ಮತ್ತು ಪೋಷಣ್ 2.0 :-** ಮಾರ್ಗಸೂಚಿಯನ್ವಯ ಅಂಗನವಾಡಿ ಕೇಂದ್ರಗಳಿಗೆ ಮೂಲಭೂತ ಸೌಕರ್ಯಗಳನ್ನು ಒಳಗೊಂಡಂತೆ, ಸುಸಜ್ಜಿತವಾದ ಕಟ್ಟಡ ನಿರ್ಮಾಣ/ ಮಾದರಿ ಕಟ್ಟಡ ನಿರ್ಮಿಸುವ ಮೂಲಕ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಾಲಾ ಪೂರ್ವ ಶಿಕ್ಷಣವನ್ನು ನೀಡಲಾಗುತ್ತಿದೆ. ಈ ಎಲ್ಲಾ ಕಾರ್ಯಕ್ರಮ/ ಯೋಜನೆಗಳನ್ನು ಶಿಶು ಅಭಿವೃದ್ಧಿಗಾಗಿ ರೂಪಿಸಿದೆ.